**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ,**
**ವಿರಾಜಪೇಟೆ**
***ಸಿ.ಸಿ.ನಂ ಃ 1013/2013***

ಪಿಡಬ್ಲ್ಯು - 1
ಸಿಡಬ್ಲ್ಯು - 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಫೀಕ್ |
| ತಂದೆಯ ಹೆಸರು | ಃ | ಯೂಸಫ್ |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | ವ್ಯಾಪಾರ |
| ವಾಸಸ್ಥಳ | ಃ | ಸಿದ್ದಾಪುರ |

***ದಿನಾಂಕ ಃ 07-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಮುಖ್ಯ ವಿಚಾರಣೆಃ ಶ್ರೀ. ಎಪಿಪಿ ವಕೀಲರಿಂದಃ-

ದಿನಾಂಕ 09-09-2012 ರಂದು ನಮ್ಮ ಗೋಡನ್‌ನಲ್ಲಿ ಕಳ್ಳತನವಾಗಿರುವ ಬಗ್ಗೆ ಚಾಸಾ-6 ರವರು ನನಗೆ ತಿಳಿಸಿರುತ್ತಾರೆ. ಈ ವಿಚಾರವಾಗಿ ನಾನು ಸಿದ್ದಾಪುರ ಪೋಲಿಸರಿಗೆ ಪಿರ್ಯಾದನ್ನು ನೀಡಿರುತ್ತೇನೆ. ನಂತರ ಸಿದ್ದಾಪುರ ಪೋಲಿಸರು ನನಗೆ ದೂರವಾಣಿ ಕರೆ ಮಾಡಿ ನಿಮಗೆ ಸೇರಿದ ಕರಿಮೆಣಸು ಸಿಕ್ಕಿದೆಯೆಂದ ನನಗೆ ತಿಳಿಸಿರುತ್ತಾರೆ. ನಂತರ ಸದರಿ ಕರಿಮೆಣಸನ್ನು ನಾನು ನ್ಯಾಯಾಲಯದಿಂದ ಅನುಮತಿಯನ್ನು ಪಡೆದು ಬಿಡುಗಡೆ ಮಾಡಿಕೊಂಡಿರುತ್ತೇನೆ. ನನಗೆ ಸದರಿ ಕರಿಮೆಣಸನುನ ಯಾರು ಕಳ್ಳತನ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಪಿರ್ಯಾದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸದರಿ ಪಿರ್ಯಾದನ್ನು ನಿಪಿ 1 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಂತರ ನಾನು ಪೋಲಿಸರ ಕೋರಿಕೆಯ ಮೇರೆಗೆ ಮೂರು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಹಾಗೂ ಸ್ವತ್ತು ಬಿಡುಗಡೆ ಮಹಜರಿಗೂ ಕೂಡ ಸಹಿ ಮಾಡಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಶ್ರೀ. ಸರ್ಕಾರಿ ವಕೀಲರಿಂದಃ-

ದಿನಾಂಕ 09-09-2012 ರಂದು ನಮ್ಮ ಗೋಡನ್‌ನಲ್ಲಿ ಚಾಸಾ6 ರವರು ಬೆಳಿಗ್ಗೆ 6 ಗಂಟೆಗೆ ದೂರವಾಣಿ ಕರೆ ಮಾಡಿ ತಿಳಿಸಿರುತಾರೆ ಎಂದರೆ ಸರಿ. ನಮ್ಮ ಗೋಡನ್ 50 ಕೆ ಜಿ ತೂಕವುಳ್ಳ 78 ಕರಿಮೆಣಸು ಚೀಲಗಳನು ತುಂಬಿಟಿದ್ದೆವು. ನೀವು ಬೆಳಿಗ್ಗೆ ಸದರಿ ಗೋದಾಮಿಗೆ ಹೋಗಿ ನೋಡಲಾಗಿ ಅದಕ್ಕೆ ಹಾಕಲಾಗಿದ್ದ ಕಬ್ಬಿಣ ಶೀಟ್‌ನ್ನು ಕತ್ತರಿಸಿ ಒಳಗೆ ಹೋಗಿ 7 ಚೀಲ ಕರಿಮೆಣಸನ್ನು ಕಳ್ಳತನ ಮಾಡಿದ್ದರು ಎಂದರೆ ಸರಿ. ಸದರಿ ಕರಿಮೆಣಸಿನ ಮೌಲ್ಯ ಸುಮಾರು 1 ಲಕ್ಷ ಇರಬಹುದು ಎಂದರೆ ಸರಿ. ನಾನು ಈ ಕುರಿತು ಸಿದ್ದಾಪುರ ಪೋಲಿಸರಿಗೆ ಬೆಳಿಗ್ಗೆ 11 ಗಂಟೆಗೆ ಪಿರ್ಯಾದು ನೀಡಿರುತೇನೆ ಎಂದರೆ ಸರಿ. ನಂತರ ಪೋಲಿಸರು ನಿಮ್ಮ ಗೋಡನ್ ಬಳಿ ಬಂದು ಮಹಜರು ಕ್ರಮ ಜರುಗಿಸಿರುತಾರೆ ಎಂದರೆ ಸರಿ.

ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ನಿಪಿ 2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸದರಿ ನೆಲದಲ್ಲಿ ಬಿದಿದ್ದ ಮತ್ತು ತೇವಾಂಶದಿಂದ ಕೂಡಿದ್ದ ಕರಿಮೆಣಸನ್ನು ಪೋಲಿಸರು ತೆಗೆದಕೊಂಡು ಹೋಗಿರುತಾರೆ ಎಂದರೆ ಸರಿ. ಮಾದರಿಗಾಗಿ ತೆಗೆಯಲಾದ ಅರ್ಧ ಕೆ ಜಿ ತೂಕವುಳ್ಳ ಕರಿಮೆಣಸನ್ನು ಮತ್ತು 100 ಗ್ರಾಂ ಕರಿಮೆಣಸನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನುನ ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ3 ಎಂದು ಗುರುತಿಸಲಾಯಿತು.

ದಿನಾಂಕ 23-08-2013 ರಂದು ಪೋಲಿಸರು ನಿಮ್ಮನ್ನು ಪೋಲಿಸ್ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಪೋಲಿಸರು ನಿಮ್ಮನ್ನು ಮಡಿಕೇರಿ ವೃತ್ತ ನಿರೀಕ್ಷಕರ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಆರೋಪಿತರು ನೀಡಿದ ಸ್ವಇಚ್ಚ ಹೇಳಿಕೆಯಲ್ಲಿ ಸದರಿ ಕರಿಮೆಣಸನ್ನು ಕೇರಳ ರಾಜ್ಯದ ಮಾನಂದವಾಡಿ ತರುವಣ ಎಂಬ ಸ್ಥಳದಲ್ಲಿರುವ ಕರಿಮೆಣಸಿನ ವ್ಯಾಪಾರಿಗೆ ಮಾರಾಟ ಮಾಡಿರುವುದಾಗಿ ನಿಮಗೆ ತಿಳಿಸಿರುತ್ತಾರೆ. ನಂತರ ನಿಮ್ಮೊದಿಗೆ ಆರೋಪಿತರನ್ನು ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿದ್ದ ಕರಿಮೆಣಸನ್ನು ನಿಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ನಂತರ ಸದರಿ ಅಂಗಡಿಯ ಮಾಲೀಕರಿಗೆ ಆರೋಪಿತರು ಈ ಕರಿಮೆಣಸನ್ನು ಕಳ್ಳತನ ಮಾಡಿ ನಿಮಗೆ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಲು ಸಾಧ್ಯವಿಲ್ಲವೆಂದು ನುಡಿದಿರುತಾರೆ. ಸದರಿ ಮಹಜರನ್ನು ನಿಪಿ 4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ನಂತರ ಆರೋಪಿತರು ಕಳ್ಳತನಕ್ಕಾಗಿ ಉಪಯೇಗಿಸಿದ ಕಾರನ್ನು ದಿನಾಂಕ 07-09-2013 ರಂದು ಅಮಾನತ್ತುಪಡಿಸಿಕೊಂಡು ಸಿದ್ದಾಪುರ ಪೋಲಿಸ್ ಠಾಣೆಗೆ ಹಾಜರುಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಕಾರಿನ ಅಮಾನತ್ತು ಮಹಜರನ್ನು ನಿಪಿ 8 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ8 ಎ ಎಂದು ಗುರುತಿಸಲಾಯಿತು. ಸಾಕ್ಷಿ ಕಾರಿನ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಲು ಸಾಧ್ಯವಿಲ್ಲವೆಂದು ನುಡಿದಿರುತಾರೆ. ಸದರಿ ಛಾಯಾಚಿತ್ರಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು.

ಈ ಕುರಿತು ನೀವು ದಿನಾಂಕ 07-09-2013 ರಂದು ಪೋಸರಿಗೆ ಒಂದು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ ಮೇರೆಗೆ ನಿಪಿ 7 ಎಂದು ಗುರುತಿಸಲಾಯಿತು. ನಂತರ ನ್ಯಾಯಾಲಯದಿಂದ ಒಟ್ಟು 320 ಕೆ ಜಿ ಕರಿಮೆಣಸನ್ನು ನ್ಯಾಯಾಲಯದಿಂದ ಬಿಡುಗಡೆ ಮಾಡಿಸಿಕೊಂಡ ಆ ಸಂದದಿರ್ಭದಲ್ಲಿ ಜರುಗಿಸಲಾಗಿದ ಸ್ವತ್ತು

ಅಮಾನತ್ತು ಮಹಜರಿಗೆ ನೀವು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೀರಿ ಎಂದರೆ ಸರಿ. ಆ ಸಂದರ್ಭದಲ್ಲಿ ಮು ಮಾ 2 ಕರಿಮೆಣಸನ್ನು ಮಾದರಿಗಾಗಿ ತೆಗೆದಿರುತ್ತಾರೆಂದರೆ ಸರಿ. ಸದರಿ ಸ್ವತ್ತು ಬಿಡುಗಡೆ ಮಹಜರನ್ನು ನಿಪಿ 9 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ9 ಎ ಎಂದು ಗುರುತಿಸಲಾಯಿತು.

***ಪಾಟಿ ಸವಾಲುಃ*** **ಶ್ರೀ ಸಿ ಕೆ ಪಿ ಮತ್ತು ಸಿ. ಎ. ವೈ. ವಕೀಲರಿಂದ ಃ**

ನಮ್ಮ ಗೋದಾಮಿನಿಂದ ಯಾವ ದಿನ ಕಳ್ಳತನ ಆಗಿದೆ ಎಂದು ನಿಮಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲವೆಂದರೆ ಸರಿಯಲ್ಲ. ನೀವು ನೀಡಿರುವ ಪಿರ್ಯಾದಿನಲ್ಲಿ ಒಂದು ವಾರದ ಮುಂಚೆ ನಿಮ್ಮ ಗೋದಾಮಿನಿಂದ ಕರಿಮೆಣಸು ಕಳುವಾಗಿದೆ ಎಂದು ನೀಡಿದ್ದೀರಿ ಎಂದರೆ ಸರಿಯಲ್ಲ. ನೀವು ನೀಡಿರುವ ಪುಕಾರು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಮ್ಮ ಗೋದಾಮಿಗೆ ಅಳವಡಿಸಿದ ಕಬ್ಬಿಣದ ಶೀಟ್‌ನ್ನು ಕತ್ತರಿಸಲಾದ ಕತ್ತರಿಯನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ಸದರಿ ಕತ್ತರಿಯನ್ನು ನಾನು ನ್ಯಾಯಾಲಯದಲ್ಲಿ ನೋಡಿರುವುದಿಲ್ಲ.

ಮು ಮಾ 1 ಮತ್ತು 2 ಕರಿಮೆಣಸು ಕೊಡಗಿನ ಜಿಲ್ಲಾದ್ಯಂತ ಸಿಗುತ್ತದೆ ಎಂದರೆ ಸರಿ. ನಾನು ಕೇರಳ ರಾಜ್ಯದ ಮಾನಂದವಾಡಿ ಗ್ರಾಮಕ್ಕೆ ನನ್ನ ಕಾರಿನಲ್ಲಿ ಹೋಗಿರುತ್ತೇನೆ. ನನ್ನ ಕಾರಿನ ದಾಖಲೆಗಳನ್ನು ಪೊಲಿಸರಿಗೆ ನೀಡಿರುವುದಿಲ್ಲ. ಪೋಲಿಸರು ಮಾನಂದವಾಡಿಗೆ ಇಲಾಖಾ ಜೀಪಿನಲ್ಲಿ ಬಂದಿದ್ದರು. ಪೋಲಿಸರು ಸುಮಾರು ಐದಾರು ಜನ ಬಂದಿದ್ದರು. ನೀವು ಮಾನಂದವಾಡಿಗೆ ಹೋಗಿರುವುದಿಲ್ಲ ಅಲ್ಲಿ ಕರಿಮೆಣಸನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಆ ಸಂದರ್ಭದಲ್ಲಿ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ಗೋಡನ್‌ಗೆ ಸಂಬಂಧಿಸಿದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಗೋದಾಮಿನ ಸರ್ವೆ ನಂ ನನಗೆ ಗೊತ್ತಿಲ್ಲ. ನಿಮ್ಮ ಗೋದಾಮಿನಿಂದ ಯಾವುದೇ ಕರಿಮೆಣಸು ಕಳ್ಳತನವಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಪೋಲಿಸರಿಗೆ ಶಾಮೀಲಾಗಿ ಸುಳ್ಳು ಪಿರ್ಯಾದಿ ನೀಡಿದ್ದೀರಿ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ಬರೆದಿದ್ದಾರೆಂದು ನನಗೆ ಈಗ ಗೊತ್ತಿಲ್ಲ. ನೀವು ಕೃತ್ಯ ಸ್ಥ,ಳದ ಮಹಜರಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಕೃತ್ಯಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

**(ಕೋನಪ್ಪ ಎನ್.ವಿ)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

**ವಿರಾಜಪೇಟೆ**